ನನ್ನ ಮಾತಾಡಿಸ್ತಿರಲಿಲ್ಲ. ಅಕ್ಕ ಪಕ್ಕದವರು ನಮ್ಮನ್ನು ಮೊದಲಿನ ಹಾಗೆ ನೋಡ್ತಿರಲಿಲ್ಲ. ನಾವು ಅಮ್ಮಾ ಅಂತ ಅತ್ತರೆ ಅಜ್ಜಿ ಸಮಾಧಾನ ಮಾಡ್ತಿದ್ರು. ಅಪ್ಪ ಹುಚ್ಚರಂತಾಗಿದ್ರು. ಇಷ್ಟೆಲ್ಲಾ ನಮಗೆ ನೋವು ಕೊಟ್ಟವರು ನೀವು. ನಿಮ್ಮನ್ನು ಪುನಃ ನಮ್ಮನೆಗೆ ಸೇರಿಸಿಕೊಳ್ಳಬೇಕಾ?''

''ಅದು ನನ್ನ ಮನೆ. ನಿಮ್ಮ ತಂದೇನ್ನ ನಾನು ಡೈವೋರ್ಸ್ ಮಾಡಿಲ್ಲ. ಅವರೇ ನನ್ನನ್ನು ಸೇರಿಸಲು ಒಪ್ಪಿರುವಾಗ ನಿನ್ನದೇನು ಅಡ್ಡಿ? ನನಗೆ ಆ ಮನೆಯಲ್ಲಿ ಇರುವುದಕ್ಕೆ ಹಕ್ಕಿದೆ. ನನ್ನ ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ನೀನು ಯಾರು?''



''ನಾನು ಓಡಿಹೋದವಳ ಮಗಳು ಅನ್ನುವ ಹಣೆಪಟ್ಟಿ ಧರಿಸಿರುವವಳು. ಮಕ್ಕಳ ಭವಿಷ್ಯದ ಬಗ್ಗೆ ಯೋಚನೆ ಇದೆಯಾ ನಿಮಗೆ? ಅಜ್ಜಿ ನನ್ನ ಮದುವೆಯ ಕನಸು ಕಾಣ್ತಿದ್ದಾರೆ. ನೀವು ಬಂದು ನಮ್ಮನೆಯಲ್ಲಿದ್ರೆ ನನ್ನನ್ನು ಯಾರು ಮದುವೆಯಾಗ್ತಾರೆ? ನೀವು ಬಂದರೂ ಆ ಮನೆಯಲ್ಲಿ ನಿಮಗೆ ಮೊದಲಿನ ಬೆಲೆ ಇರುತ್ತದೆಯಾ? ನಿಮ್ಮ ಸ್ವಾರ್ಥಕ್ಕೆ ನಮ್ಮನ್ನು ಬಲಿಕೊಡಬೇಡಿ. ನಮಗೆ ಬದುಕಲು ಅವಕಾಶಕೊಡಿ. ನಾನೂ ನನ್ನ ಭವಿಷ್ಯದ ಬಗ್ಗೆ ಸುಂದರವಾದ ಕನಸು ಕಂಡಿದ್ದೇನೆ. ಆ ಕನಸು ನನಸಾಗಬೇಕು.''

ಭುವನಾ ಮಗಳ ಭುಜ ಹಿಡಿದು ತನ್ನ ಕಡೆ ತಿರುಗಿಸಿಕೊಂಡು ಕೇಳಿದಳು. ''ಹೇಳು. ನಾನು ಸತ್ತುಹೋದರೆ ನಿಮ್ಮ ಕನಸುಗಳು ನನಸಾಗುತ್ತವೆಯಾ?''

''ಈ ಪ್ರಶ್ನೆ ನನ್ನನ್ನು ಕೇಳಬೇಡಿ. ಒಂದು ಮಾತು ನಿಜ. ನೀವು ಬಂದರೆ ನಾನು ಸಾಯುವುದು ಖಚಿತ. ಚಿಕ್ಕಂದಿನಿಂದ ಅವಮಾನ ಸಹಿಸಿ ಸಹಿಸಿ ಸಾಕಾಗಿದೆ. ಪುನಃ ಅಂತಹ ದಿನಗಳನ್ನು ಎದುರಿಸುವಷ್ಟು ಧೈರ್ಯ ನನಗಿಲ್ಲ. ಅಪ್ಪನಿಗೆ ಇದನ್ನು ಹೇಳುವುದಕ್ಕೆ ನನಗೆ ಧೈರ್ಯವಿಲ್ಲ. ದಯವಿಟ್ಟು ಯೋಚಿಸಿ. ನಮಗೆ ಸುಂದರವಾದ ಬದುಕು ಬದುಕಲು ಅವಕಾಶ ಕೊಡಿ.''

ಭುವನಾ ಮಾತನಾಡದೆ ಕೆಳಗೆ ಕುಸಿದಳು.

ಬಾಗಿಲವರೆಗೂ ಹೋದ ಸುರಭಿ ಹಿಂದಿರುಗಿ ಬಂದು ಹೇಳಿದಳು: ''ನಿಮಗೆ ಏನೂ ಆದಾಯವಿಲ್ಲಾಂತ ನನಗೆ ಗೊತ್ತು. ಅಪ್ಪ ಡೈವೋರ್ಸ್ ಮಾಡಿದ್ದಾರೇಂತ ಭಾವಿಸಿ, ಅವರು ಕೊಡುವ ಹಣಾನ ಜೀವನಾಂಶ ಅಂದ್ಕೊಂಡು ತೆಗೆದುಕೊಳ್ಳಿ. ನೀವೂ ನೆಮ್ಮದಿಯಿಂದ ಇರಬಹುದು. ನಾವೂ ನೆಮ್ಮದಿಯಿಂದ ಇರಬಹುದು.''

ಭುವನಾ ಸೋಫಾದ ಮೇಲೆ ಕುಸಿದು, ಮಗಳಾಡಿದ ಮಾತುಗಳನ್ನು ನೆನಪು ಮಾಡಿಕೊಂಡಳು.